ಶ್ರೀ ಗಂಗಹನುಮಯ್ಯ (ಮಧುಗಿರಿ): ಮಾನ್ಯ ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಧುಗಿರಿಯಲ್ಲಿ ಸರ್ಕಾರಿ ಪದವಿ ಕಾಲೇಜಿನ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಸರ್ಕಾರಿ ಪದವಿ ಕಾಲೇಜು ಪ್ರಾರಂಭಿಸುವ ಸಲುವಾಗಿ ಕಟ್ಟಡವನ್ನು ನಿರ್ಮಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಕಾಲೇಜನ್ನು ಪ್ರಾರಂಭಿಸದಿರಲು ಕಾರಣವೇನು?

ಈ) ಇದೇ ರೀತಿ ರಾಜ್ಯದಲ್ಲಿ ಎಲ್ಲೆಲ್ಲಿ ಪದವಿ ಕಾಲೇಜು ಪ್ರಾರಂಭಿಸದೇ ಕಟ್ಟಡಗಳನ್ನು ನಿರ್ಮಿಸಲಾಗಿದ? (ವಿವರ ನೀಡುವುದು)

ಶ್ರೀ ಹೆಚ್. ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು):

ಅ) ಹೌದು

ಆ) ಇಲ್ಲ

ಇ) ಈಗಾಲೇ ಟಿ.ವಿ.ವೆಂಕಟಸ್ವಾಮಿ ಕಾಲೇಜು ಅಸ್ತಿತ್ವದಲ್ಲಿದೆ. ಅದು ಅನುದಾನಿತ ಕಾಲೇಜು.

ಈ) ಯಾವುದು ಇಲ್ಲ.

ಶ್ರೀ ಗಂಗಹನುಮಯ್ಯ: ಅಧ್ಯಕ್ಷರೆ, ಸಚಿವರು ಕೊಟ್ಟಿರುವ ಉತ್ತರದಲ್ಲಿ ಟಿ.ವಿ.ವಿ. ಕಾಲೇಜ್ ಇದೆ ಎಂದು ಹೇಳಿದ್ದಾರೆ. ಟಿ.ವಿ.ವಿ. ಕಾಲೇಜು ಖಾಸಗಿ ಇದ್ದರೂ ಕೂಡ ಅಲ್ಲಿ ಸೈನ್ಸ್ ವಿಭಾಗ ಇಲ್ಲ. ಅದರ ಜೊತೆಗೆ ಅಲ್ಲಿ ಬಡಮಕ್ಕಳು, ಹರಿಜನರು ಹೆಚ್ಚಾಗಿರುವುದರಿಂದ ಅವರು ಕಾಲೇಜಿಗೆ ಸೇರಲು ಹೆಚ್ಚು ಫೀಜ್ ಕೇಳುತ್ತಾರೆ. ಇದರಿಂದ ಅವರಿಗೆ ಬಹಳ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸುವುದಕೋಸ್ಕರ ಸರ್ಕಾರಿ ಕಾಲೇಜನ್ನು ಮಂಜೂರು ಮಾಡಿಕೊಡಿ ಎಂದು ಕೇಳಿದ್ದೇವೆ.

ಅಧ್ಯಕ್ಷರು: ಗ್ರಾಂಟ್ ಇನ್‌ಏಡ್ ಕೋಡ್‌ನಲ್ಲಿ ಬರುವ ಕಾಲೇಜು ಎಂದರೆ ಸರ್ಕಾರಿ ಕಾಲೇಜು ಇದ್ದಹಾಗೆ. ಅದು ಅನುದಾನಿತ ಕಾಲೇಜ್ ಎಂದು ಮೇಲೆ ಮೀಸಲಾತಿ ಪ್ರಕಾರ ಸೀಟು ಕೊಡಬೇಕಾಗುತ್ತದೆ, ಮತ್ತು ಫೀ ಕೂಡ ಕಡಿಮೆ ಮಾಡಬೇಕಾಗುತ್ತದೆ. ಸೈನ್ಸ್ ವಿಭಾಗ ಬೇಕೆಂದರೆ ಅಲ್ಲಿ ಸೈನ್ಸ್ ವಿಭಾಗ ಪ್ರಾರಂಭ ಮಾಡಿಸಿಕೊಳ್ಳಿ.

ಶ್ರೀ ಗಂಗಹನುಮಯ್ಯ: ಅಲ್ಲಿ ಡೊನೇಷನ್ ಜಾಸ್ತಿ ಕೇಳುತ್ತಿದ್ದಾರೆ.

ಅಧ್ಯಕ್ಷರು: ತಾವು ಮಂತ್ರಿಗಳು ಉತ್ತರ ಹೇಳಿ. ಪ್ರಶ್ನೆಯೇ ಸರಿ ಇಲ್ಲವೆಂದು ಕಾಣುತ್ತದೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಅನುದಾನಿತ ಕಾಲೇಜ್ ಅಲ್ಲಿ ಇರುವುದರಿಂದ, ನಾವು ಅನುದಾನ ನೀಡುತ್ತಿದ್ದೇವೆ. ಹಾಗೂ ಅಲ್ಲಿರುವ ಉಪಾಧ್ಯಾಯರಿಗೂ ಕೂಡ ನಾವು ಸಂಬಳವನ್ನು ಕೊಡುತ್ತಿದ್ದೇವೆ. ಹೀಗಿರುವಾಗ ಮತ್ತೊಂದು ಸರ್ಕಾರಿ ಕಾಲೇಜ್‌ನ್ನು ಅಲ್ಲಿಗೆ ಕೊಟ್ಟರೆ ಅನುದಾನಿತ ಕಾಲೇಜಿಗೆ ಬರುವಂಥ ಮಕ್ಕಳು ಕಡಿಮೆ ಯಾಗುತ್ತದೆ. ಹೀಗಾಗಿ ಅಲ್ಲಿರುವ ಉಪಧ್ಯಾಯರನ್ನು ಬೇರೆ ಕಡೆ ವರ್ಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹತ್ತಿರದಲ್ಲಿ ಯಾವ ಕಾಲೇಜ್ ಇಲ್ಲ ಎಂದರೆ, ಹಾಗೂ ಬಹಳ ದೂರದಲ್ಲಿ ಕಾಲೇಜ್ ಇದೆ ಎಂದರೆ, ಅವಶ್ಯಕತೆಯನ್ನು ನೋಡಿ ಪರಿಶೀಲನೆ ಮಾಡಿ ನೋಡುತ್ತೇವೆ.

ಮಾಗಡಿಯಲ್ಲಿ ಉತ್ತಮ ಸಾರ್ವಜನಿಕ ಗ್ರಂಥಾಲಯದ ಕೊರತೆ

23 (64)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿಯಲ್ಲಿ ಉತ್ತಮ ಸಾರ್ವಜನಿಕ ಗ್ರಂಥಾಲಯ, ಗ್ರಂಥಪಾಲಕರ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈಗ ಇರುವ ಗ್ರಂಥಾಲಯಕ್ಕೆ ಸ್ವಂತ ಕಟ್ಟಡ, ಬೆಳಕು ವ್ಯವಸ್ಥೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಸ್ವಂತ ಕಟ್ಟಡವಿರುವ ಉತ್ತಮ ಗ್ರಂಥಾಲಯ ಆರಂಭಿಸುವ ಯೋಜನೆ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ಯಾವಾಗ ಆರಂಭಿಸಲಾಗುವುದು ಹಾಗೂ ಯಾವ ಸ್ಥಳದಲ್ಲಿ ಆರಂಭಿಸಲಾಗುವುದು?

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):

ಅ) ಹೌದು

ಆ) ಹೌದು

ಇ) ಹೌದು. ಗ್ರಂಥಾಲಯ ಕಟ್ಟಡ ಕಟ್ಟಲು ಸ್ವಂತ ನಿವೇಶನ ಇರುವುದಿಲ್ಲ. ಒಂದು ನಿವೇಶನ ಹಂಚಿಕೆ ಮಾಡಲು ಪುರಸಭೆಯೊಂದಿಗೆ ವ್ಯವಹರಿಸಲಾಗುತ್ತಿದೆ. ನಿವೇಶನ